ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)

CIN: U85110KA1970SGC001919

ಪ್ರಧಾನ ಕಛೇರಿ: ನಂ.82, ಶಕ್ತಿಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001

ಸಂಖ್ಯೆ: ಎ1ಪಿ1ಸಿ(ಪಿ1) ದಿನಾಂಕ: 17.01.2026

ಅಧಿಸೂಚನೆ

ದಾಖಲೆಗಳ ಪರಿಶೀಲನೆ ನಡೆಸುವ–ಕುರಿತು

ಉಲ್ಲೇಖ: 1] ನೇಮಕಾತಿ ಅಧಿಸೂಚನೆ ಸಂಖ್ಯೆ ಎ1ಪಿ1ಸಿ(ಪಿ1)/ಹೆಚ್‌ಕೆ ದಿ:03.08.2017.

2] ನೇಮಕಾತಿ ಅಧಿಸೂಚನೆ ಸಂಖ್ಯೆ ಎ1ಪಿ1ಸಿ(ಪಿ1)/ಎನ್‌ಹೆಚ್‌ಕೆ ದಿ:03.08.2017.

3] ಮಾನ್ಯ ಸುಪ್ರೀಂ ಕೋರ್ಟ್ ದಾವೆ (SLP 32255/2025)ಯ ಆದೇಶ ದಿ 23.09.2025

–***–

ಉಲ್ಲೇಖಿತ (3) ರಂತೆ, ಮಾನ್ಯ ಸುಪ್ರೀಂ ಕೋರ್ಟ್‌ನ SLP No. 32255/2025 ರ ದಿನಾಂಕ 23.09.2025ರ ಆದೇಶದಂತೆ ಈ ಹಿಂದೆ ದಿನಾಂಕ 18.02.2024ರಂದು ನಡೆಸಲಾದ ಲಿಖಿತ ಪರೀಕ್ಷೆಯಲ್ಲಿ ಹಾಜರಾದ ಅಭ್ಯರ್ಥಿಗಳಿಗೆ ಕೆ.ಇ.ಎ ಸಂಸ್ಥೆ ಮುಖಾಂತರ ಮರುಪರೀಕ್ಷೆಯನ್ನು ನಡೆಸಲಾಗಿದ್ದು ಸದರಿ ಪರೀಕ್ಷೆಯಲ್ಲಿ ಪಡೆದ ಲಿಖಿತ ಪರೀಕ್ಷೆಯ Score list ಆಧಾರದ ಮೇಲೆ ಆನ್‌ಲೈನ್ ಅರ್ಜಿಯಲ್ಲಿ ನೀಡಿರುವ ಮಾಹಿತಿಯನ್ನು ಖಚಿತಪಡಿಸಲು ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆಯನ್ನು **Government Ramnarayan Chellaram (R.C) College of Commerce and Managemant (Auditorium), opposite to Shakti Bhavan, Race Cource Road, Bengaluru-01** ರಲ್ಲಿ ನಡೆಸಲಾಗುತ್ತಿದ್ದು, ಸದರಿ ದಾಖಲೆಗಳ ಪರಿಶೀಲನೆಗೆ ಹಾಜರಾಗಬೇಕಾದ ಅಭ್ಯರ್ಥಿಗಳ ಪಟ್ಟಿ ಹಾಗೂ ದಾಖಲೆ ಪರಿಶೀಲನೆ ದಿನಾಂಕದ ವಿವರಗಳನ್ನು ಈ ಅಧಿಸೂಚನೆಗೆ ಲಗತ್ತಿಸಲಾಗಿದ್ದು, ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ.

ಸೂಚನೆ:

1) ಅಭ್ಯರ್ಥಿಗಳ ಪಟ್ಟಿಯು ಆಯ್ಕೆ ಪಟ್ಟಿಯಾಗಿರುವುದಿಲ್ಲ.
2) ಅಧಿಸೂಚನೆಯಲ್ಲಿ ಸೂಚಿಸಿದ ವಿದ್ಯಾರ್ಹತೆಯನ್ನು ಹೊರತುಪಡಿಸಿ ಸಮಾನ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.
3) ವಿಕಲಚೇತನರು(ದಿವ್ಯಾಂಗರು) ಅಭ್ಯರ್ಥಿಗಳ ದಾಖಲೆಗಳು ಸರಿಯಾಗಿ ಕಂಡುಬಂದ ನಂತರ ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗುವುದು ಸದರಿ ವೈದ್ಯಕೀಯ ಪರೀಕ್ಷೆಯ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುತ್ತದೆ. (ವೈದ್ಯಕೀಯ ಪರೀಕ್ಷೆಯ ವೆಚ್ಚವನ್ನು ಅಭ್ಯರ್ಥಿಗಳಿಂದ ಭರಿಸಲಾಗುವುದು).

ಅಭ್ಯರ್ಥಿಗಳು ಈ ಕೆಳಕಂಡ ಮೂಲ ದಾಖಲೆಗಳ (ಹುದ್ದೆಗೆ ಅನ್ವಯಿಸುವ) ಜೊತೆಗೆ ಸ್ವದೃಢೀಕೃತ (Self attested) ಜೆರಾಕ್ಸ್ ಪ್ರತಿಗಳು ಮತ್ತು ಇತ್ತೀಚಿನ ಭಾವಚಿತ್ರಗಳೊಂದಿಗೆ ಹಾಜರಾಗತಕ್ಕದ್ದು.

ಎ) **ವಯಸ್ಸು, ವಿದ್ಯಾರ್ಹತೆ ಮತ್ತು ಮೀಸಲಾತಿ** ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ಮೂಲ ದಾಖಲೆಗಳನ್ನು ಹಾಜರುಪಡಿಸುವುದು. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕಕ್ಕೆ ಮುಂಚಿತವಾಗಿ ಮಾನ್ಯವಾದ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು:

i) ಜನ್ಮ ದಿನಾಂಕಕ್ಕೆ ಆಧಾರವಾಗಿ ಹಾಗೂ ಜೇಷ್ಠತೆಯನ್ನು ನಿರ್ಧರಿಸಲು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.
ii) ID PROOF
iii) ಪದವಿ/ಡಿಪ್ಲೋಮಾ ಪ್ರಮಾಣ ಪತ್ರ (Convocation/Degree/Diploma Certificates)
iv) ಎಲ್ಲಾ ಪರೀಕ್ಷೆಗಳ(ಪ್ರತಿ ವರ್ಷ/ಪ್ರತಿ ಸೆಮಿಸ್ಟರ್‌ಗಳ)ಅಂಕಪಟ್ಟಿಗಳು.
v) ಅಂಚೆ ಕಛೇರಿಯ ಅಧಿಕಾರಿಗಳಿಂದ ಸಹಿ ಮಾಡಿದ ಚಲನ್ ಮತ್ತು ಹಣಪಾವತಿಸಿದ ರಶೀದಿ [not mandatory].
vi) ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಿದಾಗ ಪಡೆದ ಸ್ವೀಕೃತಿ ಪತ್ರ [Acknowledgement] [not mandatory].
vii) ದಿನಾಂಕ 27.12.2025 & 28.12.2025 ರಂದು ನಡೆದ ಲಿಖಿತ ಪರೀಕ್ಷೆಯ ಅಭ್ಯರ್ಥಿ ಪ್ರವೇಶ ಪತ್ರ [Hall ticket] ದಲ್ಲಿ ಪರೀಕ್ಷಾ ಮೇಲ್ವಿಚಾರಕರು ಸಹಿ ಮಾಡಿದ ಪ್ರತಿ.
viii) ಅಭ್ಯರ್ಥಿಯು ಯಾವುದೇ ಸಂಸ್ಥೆಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂತಹವರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರ. [No Objection Certificate].

2..

ಬಿ) **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ** ಅಭ್ಯರ್ಥಿಗಳು **ನಮೂನೆ-ಡಿ** ಪ್ರಮಾಣ ಪತ್ರಗಳನ್ನು ಕರ್ನಾಟಕ ಸರ್ಕಾರದ ಆದೇಶ/ನಿರ್ದೇಶನಗಳ ಪ್ರಕಾರ ಸಲ್ಲಿಸುವುದು, ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕಕ್ಕೆ ಮುಂಚಿತವಾಗಿ ಮಾನ್ಯವಾದ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.

ಸಿ) **ವಿಕಲಚೇತನ(ದಿವ್ಯಾಂಗರು) ಅಭ್ಯರ್ಥಿ:**
ಸರ್ಕಾರದ ಜ್ಞಾಪನಾ ಪತ್ರ ಸಂಖ್ಯೆ: ಸಿಆಸುಇ 115 ಎಸ್‌ಆರ್‌ಆರ್ 2005 ಬೆಂಗಳೂರು ದಿನಾಂಕ: 19.11.2005.

ಡಿ) **ಮಾಜಿ ಸೈನಿಕ ಅಭ್ಯರ್ಥಿ :**
ಕರ್ತವ್ಯ ಬಿಡುಗಡೆ ಪತ್ರ (Discharge Certificate) ಸಲ್ಲಿಸುವುದು.

ಇ) **ಹೈದರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿ(Under Article 371(J):**
ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಿಆಸುಇ 142 ಎಸ್‌ಆರ್‌ಆರ್ 2006 ದಿನಾಂಕ:5.11.2007 ರಂತೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಈ ಮೇಲೆ ತಿಳಿಸಲಾದ ಪ್ರಮಾಣ ಪತ್ರಗಳನ್ನು ಅಭ್ಯರ್ಥಿಯು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಸಲ್ಲಿಸದಿದ್ದಲ್ಲಿ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. ದಾಖಲೆಗಳ ಪರಿಶೀಲನೆಗೆ ಹಾಜರಾಗಲು ಅಭ್ಯರ್ಥಿಗಳಿಗೆ ನಿಗಮದಿಂದ ಯಾವುದೇ ಪ್ರಯಾಣ/ದಿನಭತ್ಯೆ (TA/DA) ನೀಡಲಾಗುವುದಿಲ್ಲ.

ನಿರ್ದೇಶಕರು(ಮಾ.ಸಂ.)